**E.P.No. 294/2023**

**ಪಿ.ಡಬ್ಲೂ -2**

ದಿಃ 28-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಡಿಎಚ್ ಆರ್ ಪರ ವಕೀಲರಾದ ಶ್ರೀ ಕೆ ವಿ ಎಮ್ ರವರಿಂದ**

1. ನಾನು ಆಟೋಮೊಬೈಲ್ ನಲ್ಲಿ ಡಿಪ್ಲೋಮಾ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುತ್ತದೆ, ಅದನ್ನು ನನ್ನ ಹೇಳಿಕೆ ಮೇರೆಗೆ ತಯಾರು ಮಾಡಲಾಗಿದೆ. ನನ್ನ ಅಂಗಡಿಯ ಹೆಸರು ತನಿಷ್ಕಾ ಆಟೋ ಮೊಬೈಲ್ಸ ಆಗಿರುತ್ತದೆ. 2016 ನೇ ಇಸವಿಯಲ್ಲಿ ಸದರಿ ಅಂಗಡಿಯನ್ನು ಪ್ರಾರಂಭಿಸಿರುತ್ತೇನೆ. ಆ ರೀತಿ 2016 ನೇ ಇಸವಿಯಿಂದ ಸದರಿ ಅಂಗಡಿ ಇರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಂಗಡಿ ಇರುವ ಬಗ್ಗೆ ತೋರಿಸಲು ಅದರ ಜಿಎಸ್‌ಟಿ ಟಿನ್ ನಂಬರ ಇರುತ್ತದೆ. ಇವತ್ತಿಗೂ ಅಂಗಡಿಯ ವಿಳಾಸ ಜಿಎಸ್‌ಟಿ ಟಿನ್ ನಂಬರನಲ್ಲಿ ಇರುತ್ತದೆ. ಸದರಿ ಅಂಗಡಿ ಮಹಾತ್ಮ ಪುಲೆ ರಸ್ತೆಯಲ್ಲಿ ಇರುವ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ನಾನು ಅದನ್ನು ಹಾಜರುಪಡಿಸಬಲ್ಲೆ.

2. ಆರ್ ಎಸ್ ನಂಬರ 241/ಎ ಮತ್ತು 241/ಬಿ ರ ಬಗ್ಗೆ ನನಗೆ ತಿಳಿದಿರುತ್ತದೆ. ಆರ್ ಎಸ್ ನಂಬರ 241/ಎ ಮತ್ತು 241/ಬಿ ಒಟ್ಟು ಎಷ್ಟು ಎಕರೆ ಜಮೀನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಒಟ್ಟು 8 ಎಕರೆ ವಿಸ್ತಿರ್ಣ ಹೊಂದಿರುತ್ತದೆ ಎಂದರೆ ಸರಿ. ಈ ಪ್ರಕರಣದ ಜೆ ಡಿ ಆರ್ ಹಾಗೂ ನಾಗಾಮತಿ ಚಂದ್ರಕಾಂತ ಪಾಟೀಲ ರವರು ನನ್ನ ಸಹೋದರ-ಸಹೋದರಿ ಸಂಬಂಧಿ( cousin brother and cousin sister). ಸದರಿ ಜೆ ಡಿ ಆರ್ ಹಾಗೂ ನಾಗಮತಿ ಪಾಟೀಲ ರವರ ತಂದೆ ಮಹಾವೀರ ಜಿನ್ನಪ್ಪಾ ಪಾಟೀಲ ರವರು ನನಗೆ ದೊಡ್ಡಪ್ಪ ಆಗಬೇಕು. ಈಗ ನಾನು ಈ ಪ್ರಕರಣದ ಜೆ ಡಿ ಆರ್ ಆದ ನಾಗರಾಜ ಪಾಟೀಲ ರವರ ಜೊತೆ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಲಗಾದಲ್ಲಿ ವಾಸವಿರುತ್ತೇನೆ. ಈ ಪ್ರಕರಣದಲ್ಲಿ

ನಾಗಮತಿ ಪಾಟೀಲ ರವರು ನೀಡಿರುವ ಸಾಕ್ಷ್ಯದ ಬಗ್ಗೆ ಹಾಗೂ ದಾಖಲೆಗಳ ಬಗ್ಗೆ ನನಗೆ ಅರಿವಿರುತ್ತದೆ. ನಿಪಿ-1 ದಾನಪತ್ರದಲ್ಲಿ ನಮುದಾಗಿರುವ 50x20 ಚದರ ಅಡಿಯ ಜಾಗವು ಆರ್ ಎಸ್ ನಂಬರ 241/ಎ ಮತ್ತು 241/ಬಿ ರ ಯಾವ ಭಾಗದಲ್ಲಿ ಬರುತ್ತದೆ ಎಂಬ ಬಗ್ಗೆ ಅದರಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-1 ರಲ್ಲಿ ಅದರ ಚೆಕ್ಕುಬಂದಿ ಬರೆದಿರುತ್ತದೆ ಎಂದು ನುಡಿಯುತ್ತಾರೆ.

3. ಈ ಪ್ರಕರಣದ ಡಿಎಚ್ ಆರ್ ಆದ ಕಿರಣ ಜಾದವ ರವರ ಪರಿಚಯ ನನಗೆ ಇರುತ್ತದೆ. ಸದರಿ ಕಿರಣ ಜಾದವ ರವರು ನಾಗರಾಜ ಪಾಟೀಲ ರವರ ವಿರುದ್ಧ ಪ್ಲಾಟ ನಂಬರ 31 (ಹಳೆಯ ಪ್ಲಾಟ ನಂಬರ 33) ರಲ್ಲಿ 20x20 ಚದರ ಅಡಿಯಷ್ಟು ಜಾಗದ ಕಬ್ಜೆಗಾಗಿ ಅಸಲು ದಾವಾ ಸಂಖ್ಯೆ 722/2010 ರಂತೆ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಸಹೋದರಿಯಾದ ನಾಗಮತಿ ಪಾಟೀಲ ರವರ ಜಾಗಕ್ಕೆ ನ್ಯಾಯಾಲಯದ ಬೇಲಿಫ್ ಬಂದು ಜಾಗ ಖಾಲಿ ಮಾಡಿಕೊಡುವಂತೆ ಕೇಳಿರುತ್ತಾರೆ ಎಂದು ಹೇಳಿದ್ದು ಅವರು ಯಾವ ಆಧಾರದ ಮೇಲೆ ಹಾಗೆ ಕೇಳಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ನನ್ನ ಸಹೋದರಿ ನಾಗಮತಿ ಪಾಟೀಲ ರವರು ನನ್ನ ಅಂಗಡಿಯನ್ನು spare parts ಖರೀದಿ ಮಾಡುತ್ತಿದ್ದ ಬಗ್ಗೆ ನಾನು ಅವರಿಗೆ ಗ್ಯಾರೇಜ ಹೆಸರಿನಲ್ಲಿ ರಶೀದಿಗಳನ್ನು ಕೊಟ್ಟಿರುತ್ತೇನೆ. ಹೀಗೆ 2-3 ವರ್ಷಗಳಿಂದ ಅವರಿಗೆ ರಶೀದಿ ಕೊಟ್ಟಿರುತ್ತೇನೆ. ನನ್ನ ಸಹೋದರಿ ನಾಗಮತಿ ಪಾಟೀಲ ರವರು ಕಿರಣ ಜಾದವ ರವರ ವಿರುದ್ಧ 5ನೇ ಅಧಿಕ ಸಿವಿಲ್ ನ್ಯಾಯಾಲಯ ಬೆಳಗಾವಿ ಇಲ್ಲಿ ಅಸಲು ದಾವಾ ಸಂಖ್ಯೆ 584/2021 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಈಗ ನಾನು ಸದರಿ ದಾವೆಯ ವಾದಪತ್ರವನ್ನು ನೋಡುತ್ತಿದ್ದು ಅದು ಈಗಾಗಲೇ ನಿಆರ್-1 ರಂತೆ ಗುರುತಿಸಲಾಗಿರುತ್ತದೆ ಎಂದರೆ ಸರಿ. ಸದರಿ ವಾದಪತ್ರದಲ್ಲಿ ದಾನಪತ್ರದಂತೆ ಬಂದ ಆಸ್ತಿ ಎಂದು ನಮೂದಿಸಿದ ಅದರ ಚೆಕ್ಕಬಂದಿಯನ್ನು ಬರೆಯಲಾಗಿದೆ ಎಂದರೆ ಸರಿ. ಸದರಿ ವಾದಪತ್ರದಲ್ಲಿ ಅಸಲು ದಾವಾ ಸಂಖ್ಯೆ

722/2010 ರಲ್ಲಿ ಕಿರಣ ಜಾದವ ರವರು ನಾಗರಾಜ ಪಾಟೀಲ ರವರ ವಿರುದ್ಧ 20x20 ಚದರ ಅಡಿ ಜಾಗ, ಪ್ಲಾಟ ನಂಬರ 31 ರಲ್ಲಿ ಕೋರಿ ಹೂಡಿರುವ ಸದರಿ ಜಾಗದ ಚೆಕ್ಕುಬಂದಿಯನ್ನು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾನಪತ್ರದಲ್ಲಿ ನಮೂದು ಮಾಡಿರುವ ಜಾಗದ ಚೆಕ್ಕುಬಂದಿ ಹಾಗೂ ಅಸಲು ದಾವಾ ಸಂಖ್ಯೆ 584/2023 ರಲ್ಲಿ ನಮೂದು ಮಾಡಿರುವ ಜಾಗದ ಚೆಕ್ಕುಬಂದಿಯನ್ನು ನನ್ನ ಸಹೋದರಿ ನಾಗಮತಿ ಪಾಟೀಲ ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಅದರ ಅನುಸಾರ ಕಿರಣ ಜಾದವ ರವರು ಸ್ವಾಧೀನದಲ್ಲಿ ಇರುವ ಪ್ಲಾಟ ನಂಬರ 31 ರ 20x20 ಚದರ ಅಡಿ ಜಾಗ ಹಾಗೂ ನನ್ನ ಸಹೋದರಿ ನಾಗಮತಿ ಪಾಟೀಲ ರವರು ಸ್ವಾಧೀನದಲ್ಲಿ ಇರುವ 50x25 ಚದರ ಅಡಿ ಜಾಗವು ಎರಡೂ ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿ. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದ ಮೇರೆಗೆ ಈಗ ಕಿರಣ ಜಾದವ ರವರು ನಾಗರಾಜ ಪಾಟೀಲ ರವರ ವಿರುದ್ಧ ಹೂಡಿರುವ ಈ ಪ್ರಕರಣದಲ್ಲಿ ನಾಗಮತಿ ಪಾಟೀಲ ರವರ ಜಾಗವನ್ನು ಹೊರತುಪಡಿಸಿ ನಾಗರಾಜ ಪಾಟೀಲ ರವರಿಂದ ಜಾಗದ ಸ್ವಾಧೀನವನ್ನು ಪಡೆಯಲು ನನ್ನ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ನಾಗಮತಿ ಪಾಟೀಲ ರವರ ಹೆಸರಿಗೆ ದಾನಪತ್ರದ ಪ್ರಕಾರ ಇರುತ್ತದೆ ಎಂದು ಹೇಳಲಾದ ಜಾಗದ ಪ್ಲಾಟ ನಂಬರ ಅಥವಾ ಸಿಟಿಎಸ್ ನಂಬರ ಇರುವುದಿಲ್ಲ ಎಂದರೆ ಸರಿ. ಕಿರಣ ಜಾದವ ರವರಿಗೆ ನಾಗರಾಜ ಪಾಟೀಲ ರವರಿಂದ ಕಬ್ಜೆ ಕೊಡಿಸಬಾರದು ಹಾಗೂ ಕಿರಣ ಜಾದವ ರವರಿಗೆ ತೊಂದರೆ ನೀಡಬೇಕೆಂ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**